ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 6, May-June, 2023, Pp. 73-82.**
**©*IIMRD*, Mysuru**
IIMRD JOURNALS

**www.iimrd.com**

# ಕನ್ನಡ ತತ್ವಪದ ಸಾಹಿತ್ಯದಲ್ಲಿ ಸಂಘರ್ಷದ ನೆಲೆಗಳು

***ಸುಖಮುನಿ**

*ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***ಸಾರಾಂಶ:(Abstract)***

'ಪರಿವರ್ತನೆ ಜಗದ ನಿಯಮ' ಎಂಬ ಮಾತುಗಳು ಬಹಳ ಹಿಂದಿನಿಂದಲೂ ರೂಢಿಯಾಗಿ ಬಂದಿರುವಂತಹದ್ದು. ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಬ್ಬರು ಬದಲಾವಣೆ ಬಯಸುವವರೇ. ಬದುಕಿನಲ್ಲಾಗುವ ಏರಿಳಿತಗಳು, ನೋವು ನಲಿವುಗಳು, ಮೇಲು–ಕೀಳು ಎಂಬ ಭೇದ ಭಾವಗಳು ಸರ್ವೇ ಸಾಮಾನ್ಯ. ಮನುಷ್ಯ ಬದುಕಿನಲ್ಲಿ ಇಂತಹ ಜಂಜಡಗಳು ಇದ್ದದ್ದೆ. ಸಾಮಾಜಿಕ ಜೀವನದಲ್ಲಿ ಬದುಕಿ ಬಾಳಬೇಕಾದ ಬಡ ಜೀವಗಳೇ ಬಲಿಪಶುಗಳಾಗಿ, ಬಾಳು ಬಂಗಾರವಾಗಿಸುವ ಬದಲಿ ಬಂಗು ಹಚ್ಚಿಕೊಳ್ಳುವ ಬಹುತೇಕ ಬಹು ಸಮುದಾಯಗಳ ಜನರು ಬದುಕನ್ನು ಖುಷಿಯಾಗಿ ಅನುಭವಿಸದೇ ಜೀವನದುದ್ದಕ್ಕೂ ಕಹಿಯನ್ನು ಅನುಭವಿಸುತ್ತಿದ್ದಾರೆ.

***ಮುಖ್ಯಪದಗಳು (Keywords)*** *ತತ್ವಪದ, ಜಾನಪದ, ಕನ್ನಡ ಸಾಹಿತ್ಯ, ಸಂಘರ್ಷದ ನೆಲೆಗಳು.*

**ಪೀಠಿಕೆ**

ಸಮಾಜವೆಂಬದು ನಿತ್ಯ ನಿರಂತರ ಚಲನಾಶೀಲವಾದದ್ದು. ಇಂತಹ ಚಲನಾಶೀಲ ವ್ಯವಸ್ಥೆಯಲ್ಲಿ ಕಾಲ ಕಾಲಕ್ಕೆ ತಕ್ಕಂತೆ ಬದಲಾವಣೆಯೂ ಅನಿವಾರ್ಯ. ಸಮಾಜವು ಎಲ್ಲಾ ಜಾತಿ, ಜನಾಂಗ, ಧರ್ಮದ, ಭಿನ್ನ ಭಿನ್ನ ವರ್ಗಗಳ ಏಳಿಗೆಯನ್ನು ಬಯಸುವಂತದ್ದು. ಸಮಾಜವು ಮನುಷ್ಯ–ಮನುಷ್ಯರ ನಡುವೆ ಅನ್ಯೋನ್ಯ ಭಾವಗಳನ್ನು ತಂದರೂ ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆಯದೇ ಇಡೀ ಸಾಮಾಜಿಕ ವ್ಯವಸ್ಥೆ ಬಿಕ್ಕಟ್ಟುಗಳು ಎಲ್ಲರಿಗೂ ಗೊತ್ತಿರುವಂತಹದ್ದೇ. ಆಂತರಿಕ ಭಿನ್ನತೆಗಳು, ಬಿಕ್ಕಟ್ಟುಗಳು ಜಾತಿ, ಮತ, ಪಂಥ, ಕುಲ, ಗೋತ್ರಗಳು ಸಾಮಾಜಿಕ ವ್ಯವಸ್ಥೆಯನ್ನು ಹಾಳು ಮಾಡುವ ಅಂಶಗಳು ಎಂದು ಒತ್ತಿ ಹೇಳಬೇಕಾಗಿಲ್ಲ.

ಇಂತಹ ಅಂಶಗಳಿಂದ ಇಡೀ ಸಾಮಾಜಿಕ ರಚನೆ ಭಿನ್ನ ಭಿನ್ನ ಸ್ವರೂಪವನ್ನು ಪಡೆದು ಕೊಳ್ಳಲಾರಂಭಿಸುತ್ತದೆ. ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರಗಳನ್ನು ಏರ್ಪಡಿಸುತ್ತವೆ. ಬದುಕಿನುದ್ದಕ್ಕೂ ಮನುಷ್ಯ ತಾನು ಬದುಕು ಸಾಗಿಸುತ್ತಿದ್ದಾಗ ವರ್ಣಭೇದ, ಜಾತಿ ಬೇಧ, ಧರ್ಮ ಭೇದಗಳಂತಹ ಅನಿಷ್ಟ ಕಲ್ಪನೆಗಳನ್ನು ಹುಟ್ಟು ಹಾಕುವುದರ ಮೂಲಕ ಮೇಲ್ಜಾತಿಗಳು ಸಮಾಜದಲ್ಲಿ ತಾಂಡವ ನೃತ್ಯವನ್ನು ಹಾಡುತ್ತಲಿವೆ.

*Please cite this article as:* ಸುಖಮುನಿ. (2023). ಕನ್ನಡ ತತ್ವಪದ ಸಾಹಿತ್ಯದಲ್ಲಿ ಸಂಘರ್ಷದ ನೆಲೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 73–82.*

ಇಂತಹವುಗಳಿಂದಲೇ ಮನುಷ್ಯ–ಮನುಷ್ಯನ ನಡುವೆ ಮಡಿ–ಮೈಲಿಗೆ, ಜಾತಿ ಸಂಘರ್ಷ, ವರ್ಗ ಸಂಘರ್ಷ, ಮಹಿಳಾ ಶೋಷಣೆ ಹೀಗೆ ಹತ್ತು ಹಲವಾರು ಸಮಸ್ಯೆಗಳು ಉದ್ಭವಿಸಿದವು. ಇಂತಹ ಸಮಸ್ಯೆಗಳಿಂದ ಧರ್ಮ ಧರ್ಮಗಳು ಒಡೆದು ಹೋಗಿ ಕಟಿಬದ್ಧ ಸಾಂಪ್ರದಾಯಗಳ ವಿರುದ್ಧ ಹೊಸ ಧರ್ಮಗಳ ಉದಯಿಸಿದವು. ಆಯಾ ಧರ್ಮಗಳಲ್ಲಿ ದಾರ್ಶನಿಕರು ಹುಟ್ಟಿ ಬಂದು ಸಾಮಾಜಿಕ ವ್ಯವಸ್ಥೆಯನ್ನು ಕಟು ಸಾಂಪ್ರದಾಯವಾದಿಗಳಿಂದ ಮುಕ್ತಿಗೊಳಿಸಲು ಪಣ ತೊಟ್ಟು ತಮ್ಮ ತಾತ್ವಿಕ ಸಿದ್ಧಾಂತಗಳಿಂದ ಶಾಶ್ವತವಾಗಿ ಗೊಂದಲಗಳಿಗೆ ಮುಕ್ತಿ ಹಾಡಲು ಶ್ರಮಿಸಿದಂತವರು ಇವರಾಗಿದ್ದಾರೆ.

ಶ್ರಮಿಕರು, ದೀನ ದಲಿತರು, ಮೇಲು–ಕೀಳು, ಉಚ್ಚ–ನೀಚ ಎಂಬ ಶ್ರೇಣಿಕೃತ ವ್ಯವಸ್ಥೆಗಳನ್ನು ತಮ್ಮ ವಿಚಾರ ಧಾರೆಗಳ ಮೂಲಕ ತಲಸ್ಪರ್ಶಿ ಬದಲಾವಣೆಗೆ ಮುದ್ರೆಯನ್ನು ಹಾಕಿದರು. ಅವತ್ತಿನ ಸಂದರ್ಭದಲ್ಲಿ ಇಂತಹ ಸಮಾಜ ಮುಖಿ ಚಿಂತಕರು ಇರದಿದ್ದರೆ? ಬಹುಷಃ ಇಡೀ ನಾಡು ಸಂಘರ್ಷಗಳ ಗೂಡಾಗುತ್ತಿತ್ತೇನೋ? ಎಂಬಿತ್ಯಾದಿ ಚರ್ಚೆಗಳು ಬರುತ್ತವೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿದ್ದು ಬದುಕುವ ಬಡ–ಬಗ್ಗರ ಬದುಕಿನ ಬವಣೆ ಹೇಳತೀರದು. ಅದಕ್ಕಾಗಿ ಕಾಮಧೇನುವಾಗಿ ಕರುಣೆ, ದಯೆ, ದಾಕ್ಷಿಣ್ಯ ಭಾವದಿಂದ ಮೂಢ ನಂಬಿಕೆಯಂತಹ ಅನಿಷ್ಟ ಪದ್ಧತಿಗಳಿಂದ ಬಂಧನಕ್ಕೆ ಸಿಲುಕಿದ ಜನ ಸಮುದಾಯಗಳಿಗೆ ಆಸರೆಯಾಗಿ ತತ್ವ ಪದಕಾರರು ಶ್ರಮಿಸಿರುವುದು ಒಂದು ಇತಿಹಾಸವೆಂದೆ ಪರಿಗಣಿಸಬಹುದಾಗಿದೆ.

**ಸಂಘರ್ಷ ಪದದ ಅರ್ಥ**

ಸಾಮಾನ್ಯವಾದ ಅರ್ಥದಲ್ಲಿ ಸಂಘರ್ಷ ಪದವನ್ನು ಬಿಡಿಸಿದಾಗ ಅದು ಘರ್ಷಣೆ, ತಿಕ್ಕಾಟ, ಹೋರಾಟ ಎಂಬ ಅರ್ಥವನ್ನು ಕೊಡುತ್ತದೆ.

**ಸಾಮಾಜಿಕ ಸಂಘರ್ಷಗಳು**

ಸಮಾಜ ನಿಂತ ನೀರಲ್ಲ. ಅದು ನಿರಂತರವಾಗಿ ಹರಿಯುತ್ತಿರುವ ನದಿಯಂತೆ ಎಂಬ ಮಾತು ಚಲನಾತ್ಮಕತೆಯನ್ನು ಪ್ರತಿಬಿಂಬಿಸುತ್ತದೆ. ಚಲನೆ ಎಂದರೆ ಬದಲಾವಣೆ, ಬದಲಾಗುವುದು ಎಂಬ ಅರ್ಥ ಕೊಡುತ್ತದೆ. ಇಲ್ಲಿ ಬದಲಾಗುವುದು ಎಂದರೆ ಮೇಲ್ನೋಟಕ್ಕೆ ಸಮಾಜ ಎಂದು ಕಂಡುಬಂದರೂ ಸಮಾಜದಲ್ಲಿರುವ ವಿವಿಧ ಮುಖಗಳ ತಿದ್ದುವುದು ಎಂದರ್ಥವಾಗುತ್ತದೆ. ಸಮಾಜವೆಂದಾಗ ಒಂದೇ ರೀತಿಯ ಮನುಷ್ಯರಿರುವುದು ಕಾಣ ಸಿಗುವುದಿಲ್ಲ.

ಭಿನ್ನ ಭಾವದ ಜನರು ತಮ್ಮ ಸಂಪ್ರದಾಯ, ಆಚಾರ–ವಿಚಾರ, ನಂಬಿಕೆ, ಮೂಢ ನಂಬಿಕೆಗಳನ್ನು ನಂಬಿ ಮುನ್ನಡೆಯುವ ಸ್ಥಿತಿ ಇವತ್ತಿಗೂ ನೋಡುತ್ತೇವೆ. ತತ್ವಪದಕಾರರು ಸಾಮಾಜಿಕ ಬದುಕಿನಲ್ಲಿ ಬದುಕಿದವರಾಗಿದ್ದಾರೆ. ಅವರು ಸಾಮಾಜಿಕ ವ್ಯವಸ್ಥೆಯಲ್ಲಿ ಬರುವ ಕೆಳ ಸ್ತರದ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋದವರು. ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾನ ಮಾನಗಳನ್ನು ದೊರಕಿಸಿ ಕೊಡುವಲ್ಲಿ ಇವರ ಪಾತ್ರ ಬಹುದೊಡ್ಡದು. ಆದರೂ ಮೇಲು–ಕೀಳು, ಉಚ್ಚ–ನೀಚ, ಶ್ರೀಮಂತ–ಬಡವ ಹೆಣ್ಣು–ಗಂಡು, ಹಿಂದು–ಮುಸ್ಲಿಂ ಎಂಬ ಭಿನ್ನಭಾವವನ್ನು ಮರೆಸುವಲ್ಲಿ ಇವರು ಶ್ರಮ ಪಟ್ಟಿದ್ದು ಅಷ್ಟಿಷ್ಟಲ್ಲ.

**ಜಾತಿ ಸಂಘರ್ಷ**

ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಎಂಬ ಎರಡಕ್ಷರವೂ ಮನುಷ್ಯ–ಮನುಷ್ಯರ ಸಂಬಂಧಗಳನ್ನು ಕಡಿತಗೊಳಿಸಿದೆ. ಮಡಿ–ಮೈಲಿಗೆಯೆಂಬ ಘೋರ ಆಚರಣೆಯು ಸಮಾಜದ ದುರಂತಕ್ಕೆ ಕಾರಣೀಕರ್ತನಾಗಿ ನಿಂತಿದೆ. ಇದನ್ನು ನೋಡಿದರೆ ಸಮಾಜದ ಅಧೋಗತಿ ಖಂಡಿತವಾಗಿ ಶೋಚನೀಯವೆನಿಸುತ್ತದೆ. ಜಾತಿ ಜಾತಿ ಎಂದು ತಡ ಬಡಿಸುವ ಕೆಟ್ಟ ಮನುಷ್ಯರ ನಡುವೆ ಯಾರ ಮೇಲಲ್ಲ. ಯಾರು ಕೀಳು ಅಲ್ಲ ಎಂಬ ತತ್ವ ಪದಕಾರರ ಭಾವನೆ ಎದ್ದು ಕಾಣುತ್ತದೆ.

ಜಾತಿಯ ಬಗ್ಗೆ ಅಣ್ಣಪ್ಪ ಮಾಸ್ತರರವರು ಈ ಕೆಳಗಿನಂತೆ ಹೇಳಿದ್ದಾರೆ.

***"ಜಾತಿ ಜಾತಿಯೆನ್ನುವ ಕೋತಿ***<br>
***ನಿಂದ್ಯಾವ ಜಾತಿಯೊಂದು ನೀ ಹೇಳತಿ***<br>
***ಹುಟ್ಟುವಾಗ ಎಲ್ಲರದು ಒಂದೇ ಸ್ಥಿತಿ***<br>
***ಇದನ್ನು ನೀ ಯಾಕ ಮರೆತಿ"***[1]

ಇಲ್ಲಿ ಜಾತಿ ಜಾತಿ ಎಂದು ಸಮಾಜದಲ್ಲಿ ತಡವರಿಸುವವರನ್ನು 'ಕೋತಿಗೆ' ಹೋಲಿಸಿದ್ದಾರೆ. ಮನುಷ್ಯ ಹುಟ್ಟುವಾಗ ಗರ್ಭದಲ್ಲಿ ಹುಟ್ಟುವುದು ಎಲ್ಲರಿಗೂ ಗೊತ್ತಿರುವಂತಹದ್ದೆ. ಆದರೆ ಅದರಿಂದ ಹೊರಗೆ ಬಂದಾಗ ಜಾತಿ ಹೇಗಾಗುತ್ತೇ? ಅದನ್ನು ಮನುಷ್ಯ ಯಾವುತ್ತು ಮರೆಯಬಾರದು ಎಂಬ ಭಾವನೆ ಇದೆ. ಆದರೂ ಮನುಷ್ಯ ಜಾತೀಯತೆಗೆ 'ದಾಸ'ನಾಗಿ ಅದನ್ನು ಆಚರಿಸುವುದಲ್ಲದೆ, ಅನ್ಯ ಭಾವನೆಗಳಿಗೆ ನೋವುಂಟು ಮಾಡುತ್ತಿದ್ದಾನೆ. ಒಬ್ಬೊಬ್ಬರ ಮುಂದೆ ಒಂದೊಂದು ತರಹ ಊಸರವಳ್ಳಿಯಂತೆ ಕ್ಷಣಕ್ಕೊಂದು ವೇಶ ಬದಲಿಸುತ್ತಿದ್ದಾನೆ. ಅಂತಹವರು ಸಮಾಜಕ್ಕೆ ಅಪಾಯಕಾರಿಯೆಂದು ವಿರೋಧಿಸಿದ್ದಾರೆ.

ತತ್ವಪದಕಾರರು ಸಾಮಾಜಿಕ ವ್ಯವಸ್ಥೆಯನ್ನು ಹತ್ತಿರದಿಂದ ಕಂಡಂತವರು. ಅವರಲ್ಲಿಯೇ ಕೆಲವರು ಜಾತಿ ಜಾತಿಯ ಒಳಗಿರುವ ವಿಷಮತೆಯನ್ನು ಸಾರಾಸಗಟಾಗಿ ತಿರಸ್ಕರಿಸಿದವರು ತತ್ವಪದಕಾರರು. ಅಮರೇಶ ನುಗಡೋಣಿ ಅವರು ಹೇಳುವಂತೆ "ತತ್ವ ಪದಕಾರರಲ್ಲಿ ಸಮಾಜದಲ್ಲಿರುವ ಹಲವಾರು ಜಾತಿ, ಜನಾಂಗದಿಂದ ಬಂದವರಿದ್ದಾರೆ. ಅವರವರಿಗೆ ಕುಲ ಕಸುಬುಗಳಿವೆ. ಸಮಾಜದ 'ಉನ್ನತ ಸ್ಥಾನ'ವಾದ ಮಠಾಧೀಶ ಪದವಿಗೇರಿದವರೂ ಇದ್ದಾರೆ. ಘನ ಮಠದ ಶಿವಯೋಗಿ, ನೀರಲಕೇರಿ ಬಸವಲಿಂಗ ಶರಣ ಮುಂತಾದವರು ಮಠ ಪರಂಪರೆಯಲ್ಲಿ ಬಾಳಿದವರು"[2] ಎಂದು ಹೇಳುತ್ತಾರೆ. ಇದನ್ನು ಗಮನಿಸಿದಾಗ ಸಾಮಾಜಿಕ ವ್ಯವಸ್ಥೆಯಲ್ಲಿ ತತ್ವ ಪದಕಾರರು ಕೂಡ ಜಾತಿಯಿಂದ ದೂರವಿಲ್ಲ. ಆದರೆ ಸ್ವ–ಜಾತಿಯೆಂದು ಹೋಗದೇ ಎಲ್ಲಾ ಜಾತಿ ಜನಾಂಗಗಳನ್ನು ಒಟ್ಟುಗೂಡಿಸಿ ಸಮಾನತೆ ಕಡೆಗೆ ಕೊಂಡೊಯ್ಯುವಲ್ಲಿ ಶ್ರಮಿಸಿದರು. ಇದರ ಫಲವಾಗಿ ಭಿನ್ನ ಸಮುದಾಯಗಳು ಇವರ ಹಾಕಿಕೊಟ್ಟ ಸಮಾನತೆ ತತ್ವಕ್ಕೆ ಕಟಿ ಬಿದ್ದು ಬದುಕನ್ನು ಸಾಗಿಸುತ್ತ ಬಂದಿದ್ದಾರೆ. ಇವರು ಜಾತಿಯೆಂಬುದು ಎಲ್ಲಿಂದ ಬಂತು? ಎನ್ನುವ ತಾರ್ಕಿಕ ಪ್ರಶ್ನೆ ಯಾವ ವಿದ್ವಾಂಸರೇ ಉತ್ತರ ಕೊಡದೇ ಇರುವ ಪರಿಸ್ಥಿತಿಗಳು ಬಂದಿರುವುದು ಅತ್ಯಂತ ಮಹತ್ವವೆನಿಸುತ್ತವೆ. ಜಾತಿ ಉಗಮದ ಬಗ್ಗೆ ಗೊತ್ತಿಲ್ಲದ ಮನುಷ್ಯ ಜಾತಿ ಎಂಬ ಪರಿಕಲ್ಪನೆಯನ್ನು ಬಿಡಿಸದೇ ಹೋಗಿದ್ದಾನೆ. ಇವತ್ತಿಗೂ ಅವರ ಚಿಂತನೆಗಳು ಸಾಮಾಜಿಕ ಕ್ರಾಂತಿಗೆ ತೆರೆದಿಡುತ್ತಿರುವುದು ಗಮನಾರ್ಹವೆಂದು ಭಾವಿಸುತ್ತೇನೆ.

ಸಾಮಾಜಿಕ ಬದುಕಿನಲ್ಲಿ ಕುಲಗಳ ಕುರಿತು ಸಾಮಾಜಿಕ ವ್ಯವಸ್ಥೆಯಲ್ಲಿ ಇಲ್ಲಿಯವರೆಗೆ ಟೀಕೆ ಟಿಪ್ಪಣಿಗಳಿಗೆ ಅವಕಾಶಗಳಿಲ್ಲ. ಸಂದರ್ಭಗಳನ್ನು ಜನ ಸಮುದಾಯಗಳು ಕಂಡಿದ್ದವು. ಇಂತವರ ನೀತಿ–ಬೋಧೆಗಳು, ತತ್ವ ವಿಚಾರಗಳು ಎದ್ದು ನಿಂತು ಪ್ರಶ್ನೆ ಮಾಡುವಲ್ಲಿಯೂ ಕೂಡಾ ಪ್ರಭಾವಿತವಾಗಿವೆ. ಮನುಷ್ಯ ಹುಟ್ಟಿನಿಂದ ಜಾತಿ ನಿರ್ಣಯವಾಗುತ್ತದೆ ಎಂಬ ಮಾತನ್ನು ಗಮನಿಸಬೇಕಾಗುತ್ತದೆ. ಮನುಷ್ಯ ಹುಟ್ಟಿದ ತರುವಾಯದಲ್ಲಿ ಅವನು ಅದೇ ಜಾತಿಯೆನ್ನುವ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿ ಓರೆಗೆ ಹಚ್ಚಿ ಅದರ ತಳ ಮೂಲಗಳ ಹುಡುಕುವಿಕೆಯಿಂದ ಜಾತಿ ವ್ಯವಸ್ಥೆಯು ಅಲುಗಾಡುವ ಸ್ಥಿತಿಗೆ ಬಂದಿದೆಯೆಂದರೆ ಅದು ವಚನಕಾರರು ಮತ್ತು ತತ್ವಪದಕಾರರು ಚಿಂತನಾ ಕ್ರಮಗಳಿಂದ ಎಂದರೆ ತಪ್ಪಾಗುವುದಿಲ್ಲ. ಸಾಮಾಜಿಕ ಬದುಕಿನಲ್ಲಿ ನಡೆಯಬಹುದುದಾದ ರೀತಿ–ನೀತಿಗಳು ಕೆಲವು ಸಾರಿ ಶ್ರೇಣಿಕೃತ ಜಾತಿ ವ್ಯವಸ್ಥೆಯನ್ನು ತಳವನ್ನೇ ನಡುಗಿಸುತ್ತವೆ.

ಕಡಕೋಳ ಮಡಿವಾಳಪ್ಪನ ಶಿಷ್ಯ ಖೈನೂರು ಕೃಷ್ಣಪ್ಪ ಸ್ಮಾರ್ತ ಬ್ರಾಹ್ಮಣನಾದರೂ ಅವರ ಧರ್ಮದ ಪ್ರಭಾವಕ್ಕೆ ಒಳಗಾಗದೇ ಬ್ರಾಹ್ಮಣ್ಯವನ್ನೇ ದಿಕ್ಕರಿಸುವುದು ಒಂದು ಇತಿಹಾಸವೆ ಸರಿ. ಇಂತ ನಿರ್ಧಾರಗಳು ತಮ್ಮ ಹಿತಕ್ಕಾಗಿ ಅಲ್ಲ. ಪ್ರಜಾ ವ್ಯವಸ್ಥೆಯ ಸಲುವಾಗಿಯೇ ಆಗಿತ್ತು. ಯಾಕೆಂದರೆ ಜಾತಿ ಎಂಬ ಗೋಜಲು ಸಮಾಜದ ಮೇಲೆ ಹೇರಿದ್ದ ಶೋಷಣೆ, ದಬ್ಬಾಳಿಕೆ ದೈವದ ಹೆಸರಿನಲ್ಲಿ ಸತಾಯಿಸುವ ರೀತಿಗಳು ಅವರಿಗೆ ತಾಳ್ಮೆಗೆಡಿಸುತ್ತಿದ್ದವು. ಜಾತಿಯಲ್ಲಿ ಸ್ಮಾರ್ತ ಬ್ರಾಹ್ಮಣನಾದರೂ ಕಡಕೋಳ ಮಡಿವಾಳಪ್ಪನ ಪ್ರಭಾವದಿಂದ ಲಿಂಗವಂತ ಸಮಾಜಕ್ಕೆ ಹೊರಳಿದ್ದನ್ನು ಅವತ್ತು ತೀವ್ರವಾಗಿ ಖಂಡಿಸಿತ್ತು. ಕೊನೆಗೂ ಬ್ರಾಹ್ಮಣ ಜಾತಿಯ ಕಿರುಕುಳದಿಂದ ರೋಸಿ ಹೋಗಿ ಸಾವನ್ನಪ್ಪುವುದು ಒಂದು ಇತಿಹಾಸವೇ ಸರಿ. ಇಂತಹ ಅನುಭಾವಿಗಳ ದುರ್ಮರಣಕ್ಕೆ ಜಾತಿಯ ಸಂಘರ್ಷಗಳೇ ಕಾರಣವಾಗಿವೆ. ಅದರಲ್ಲೂ ಮೇಲು ಕೀಳೆಂಬುದು ಸಹಿಸಲು ಸಾಧ್ಯವೇ ಇಲ್ಲ. ಯಾರು ಮೇಲಲ್ಲ. ಯಾರು ಕೀಳಲ್ಲ ಎಂಬ ವಾಕ್ಯ ಧರ್ಮ ಸಮನ್ವಯಕ್ಕೆ ದಾರಿ ಮಾಡಿಕೊಡುತ್ತದೆ. ಕೆಲವು ತತ್ವ ಪದಕಾರರಾದ ನಾಯಿಕೊಡೆ ನಾಗಮೂರ್ತಿ ಅವರ ತತ್ವಪದ ಈ ಕೆಳಗಿನಂತಿದೆ;

***"ಉಚ್ಚ ನೀಚ ಅನ್ನತೀದಿ ಹುಚ್ಚನಾಯಿ***
***ಉಚ್ಚಿಯೊಳು ಬಂದಿದಿ ಮುಚ್ಚುಬಾಯಿ***
***ಮುಟ್ಟಿ ತಟ್ಟಿ ಅನ್ನುತೀದಿ ಮಂಡ ಖೋಡಿ***
***ಮುಡ ಚೆಡ್ಡಿನೊಳಗೆ ಬೆಳೆದ ಮರುವುಗೇಡಿ"***[4]

ಎಂಬ ನಾಯಿ ಕೊಡೆ ನಾಗಮೂರ್ತಿ ಅವರ ತತ್ವ ಪದದಲ್ಲಿ 'ಉಚ್ಚ ನೀಚ' ಎಂಬ ಪರಿಕಲ್ಪನೆಗಳನ್ನು ತಿರಸ್ಕಾರ ಮಾಡಿದ್ದಾರೆ. ತಳ ಗೊತ್ತಿಲ್ಲದೇ ತತ್ವದ ಅರ್ಥ ಗೊತ್ತು ಹೇಗಾಗುತ್ತೇ? ಎಂಬ ಮಾತು ಬಹು ಮಾರ್ಮಿಕವಾಗಿ ಇರುವಂತಹದ್ದು. ಸಮಾಜವು ಹೇಗೆ ಇದ್ದರೂ ಎರಡು ಬಗೆಯುವ ಜನರು ತುಂಬಿರುತ್ತಾರೆ. ಇಂತಹವುಗಳನ್ನು ಕಂಡ ಕಲ್ಯಾಣಿ ಮಾಸ್ತರರು ಈ ಕೆಳಗಿನಂತೆ ಅಭಿಪ್ರಾಯ ಪಡುತ್ತಾರೆ.

***"ಜನರಲ್ಲಿ ಹೆಚ್ಚಾಯಿತೆ ಜಾತಿ ಭೇದ***
***ಸ್ವಾತಂತ್ರ್ಯ ಸಿಕ್ಕು ಏನು ಫಲವಾದ***
***ರಾಜಕೀಯ ಧಾರ್ಮಿಕ, ಆಧ್ಯಾತ್ಮದ***
***ಅನುಭವಿಲ್ಲೊ, ಅಧೋಗತಿ ದೇಶದೊ"***[5]

ಭಾರತ ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಸಿಕ್ಕಿದ್ದು ಎಲ್ಲರಿಗೂ ಗೊತ್ತಿರುವಂತದ್ದೆ. ಆದರೆ ಸಿಕ್ಕು ಇಷ್ಟು ವರ್ಷಗಳಾದರು ಕೂಡಾ ಎಲ್ಲರೂ ಸಮವೆನ್ನುವ ಭಾವನೆ ಇಲ್ಲ ಜಾತಿ ಭೇದವೇ ಉತ್ತುಂಗದಲ್ಲಿ ಇದೆ. ಅಂದಾಗ ಉದ್ಧಾರ ಆಗುವುದು ಹೇಗೆ? ರಾಜಕೀಯ, ಧಾರ್ಮಿಕವಾಗಿ, ದೇಶವು ಅಧೋಗತಿಗೆ ಹೋಗುತ್ತಿರುವುದನ್ನು ಕಂಡು ದೇಶ ಹೇಗೆ ಮುಂದುವರೆಯುತ್ತದೆ? ಇಷ್ಟೆಲ್ಲಾ ಇದ್ದು ಸ್ವಾತಂತ್ರ್ಯ ಸಿಕ್ಕಿದ್ದು ಯಾವ ಫಲ? ಎಂಬ ಪ್ರಶ್ನೆ ಪ್ರತಿಯೊಬ್ಬರು ಗ್ರಹಿಸಬೇಕಾಗಿರುವಂತಹದ್ದು. ಇಡೀ ದೇಶ ಈ ರೀತಿಯಿಂದಾಗಿ ಭೀತಿಯಲ್ಲಿ ಮುಳುಗುವಂತಾಗಿದೆ. ಕುಲ ಕುಲವೆಂದು ಬಡಿದಾಡುವ ಸಮಾಜದಲ್ಲಿ ಕುಲದ ನೆಲೆಯೇ ಗೊತ್ತಿಲ್ಲದ ಜನರು ಪರಸ್ಪರ ಅವೈಜ್ಞಾನಿಕವಾಗಿ ತಮ್ಮನ್ನೇ ಅಂಧಕಾರಕ್ಕೆ ತಾವೇ ದೂಡಿಕೊಳ್ಳುತ್ತಿದ್ದಾರೆ. ಕುಲವೆಂಬುದು ನಿನ್ನೆ ಮೊನ್ನೆಯದಲ್ಲ ಅದು ತ್ರೇತಾಯುಗ, ದ್ವಾಪರ ಯುಗ, ಕೃತಯುಗ ದಾಟಿ ಬಂದು ಈಗ ಕಲಿಯುಗಕ್ಕೆ ಬಂದು ನಿಂತಿದೆ. ಆದರೆ ಕಲಿಯುಗದಲ್ಲಿ ಕುಲದ ಕಲಹವನ್ನು ಕಂಡು ಈ ಕೆಳಗಿನಂತೆ ವಿಡಂಬಿಸಿದ್ದಾರೆ.

***"ಕಲಿಯುಗದೊಳಗಿನ ಕಲಹವ ಕೇಳಿರಿ***

***ಕುಲ ಕುಲ ಎನ್ನುವ ಕಾಲವನು***

***ಕುಲ ಕುಲ ಎನ್ನುತ ಬಲೆಯಲ್ಲಿ ಬೀಳುತ***

***ಹೊಲೆ ಹೊಲೆಯ ಎನ್ನುತ ಹಿಂದುಳಿಯಿತು"*** [೫]

ಕಲಿಯುಗವು ಎಷ್ಟೆಲ್ಲಾ ಘಟನೆಗಳಿಗೆ ಮೂಕ ಸಾಕ್ಷಿಯಾಗುತ್ತದೆ ಎಂದರೆ ಅದಕ್ಕೆ ತತ್ವ ಪದಕಾರರು ಹೊರತಾಗಿಲ್ಲ. ತತ್ವಪದಕಾರರು ತಾತ್ವಿಕ ಚಿಂತನೆಯಿಂದ ದೂರದೃಷ್ಟಿಯ ಮೂಲಕ ಕಂಡು ಕೊಂಡಿದ್ದಾರೆ. ಕಲಿಯುಗದಲ್ಲಿ ಕಲಹಗಳು ಸರ್ವೇ ಸಾಮಾನ್ಯವಾಗಿ ಬಿಟ್ಟಿವೆ. ಕುಲ ಭೇದಗಳು ಲೆಕ್ಕಕ್ಕೆ ಇಲ್ಲದಷ್ಟು ವಿಶಾಲವಾಗಿ ಹಬ್ಬಿಕೊಂಡಿವೆ. ಇದು ಸರಿಹೋದದಲ್ಲಿ ಹೊಲೆಯ, ಮಾದಿಗ, ಉಚ್ಚ–ನೀಚ ಎಂಬ ಭೇದ ಭಾವದಿಂದಲೇ ಈ ದೇಶ ಹಿಂದುಳಿದಿರುವುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪುರುಷ ತತ್ವ ಪದಕಾರರು ಅಷ್ಟೇ ಅಲ್ಲದೇ ಮಹಿಳಾ ತತ್ವ ಪದಕಾರ್ತಿಯರು ಕೂಡಾ ಸಾಮಾಜಿಕ ಚಿಂತನೆ ಮಾಡಿದ್ದಾರೆ. ಜಾತಿ–ಮತ–ಪಂಥಗಳನ್ನು ದಿಕ್ಕರಿಸಿ ಸಮಾಜದ ಜನರ ಭಾವನೆಗಳಿಗೆ ಬೆಳಕಾದವರ ಸಾಲಿನಲ್ಲಿ ರಾಯಚೂರಿನ ಹನುಮಂತವ್ವ ಒಬ್ಬಳು. ಕರ್ಮಠ ವೈಶ್ಯರ ಮನೆಯಲ್ಲಿ ಬೆಳೆದವಳಾಗಿದ್ದರೂ ಜಾತ್ಯಾತೀತ ನಿಲುವುಗಳನ್ನು ಅಪ್ಪಿಕೊಂಡವಳು. ಯಾವ ಕುಲ ಯಾವ ಕುಲವೆಂದು ಕೇಳುವವರನ್ನು ಈ ಕೆಳಗಿನಂತೆ ಮೂದಲಿಸುತ್ತಾಳೆ.

***"ಕುಲ ಕೇಳುವರೇನೊ। ಮಹಾತ್ಮರ***

***ಕುಲವ ಕೇಳುವರೇನೊ ॥ಪ॥***

***ಜಾತಿ ಮತಗಳಳಿದು ತಮ್ಮೊಳು ।***

***ಜ್ಯೋತಿಗಳೊಳು ಬೆರೆದೇ***

***ನೀತಿ ನಿರ್ಮಲದಿಂದ ಸ್ವಾರ್ಥವ ನೀಗಿಸಿ***

***ನೇತ್ರವಗಲದಂತೆ ಏಕೋ ಭಾವದಿ ಇರುವ"*** [೬]

ಈ ಮೇಲಿನ ತಾತ್ವಿಕ ನುಡಿಗಳು ಕುಲ ಕುಲವೆನ್ನುವ ಹೀನ ಮನಸ್ಸಿನವರಿಗೆ ಎಚ್ಚರಿಸುವ ಸಂದೇಶವಿದೆ. ಜಾತಿ ಮತಗಳ ತಿರಸ್ಕಾರವಿದೆ. ಮನುಷ್ಯ ತನ್ನಲ್ಲಿರುವ ಆತ್ಮ ಜ್ಞಾನವನ್ನು ಬಲಗೊಳಿಸಿ–ಕೊಳ್ಳಬೇಕೆಂದರೆ ಜಾತೀಯತೆಯ ಭಾವನೆಗಳನ್ನು ಕಿತ್ತೊಗೆಯಬೇಕು. ಅಂದಾಗಲೇ ಮನುಷ್ಯ ಜ್ಞಾನ ಮಾರ್ಗದಲ್ಲಿ ಮುನ್ನಡೆಯುತ್ತಾನೆ ಎಂಬ ಮಾತು ಗಮನಾರ್ಹವಾಗಿದೆ. ಇವರಲ್ಲಿ ಜಾತಿ ಮೀರಿದವರು ಪರಮಾತ್ಮರಾಗಿದ್ದಾರೆ. ಅವರು ಕರುಣೆ ಮತ್ತು ವಾತ್ಸಲ್ಯಗಳನ್ನು ಧಾರೆ ಎರೆದು ಸಮ ಸಮಾಜದ ಕಲ್ಪನೆಗೆ ನಾಂದಿ ಹಾಡಿದವರಾಗಿದ್ದಾರೆ. ಯಾವ ಕುಲ ಭೇದಗಳನ್ನು ಎಣಿಸದೇ ಪ್ರೇಮ ಮಾತ್ರದಿಂದಲೇ ಮಾತ್ರ ಸದ್ಗತಿ ಪಡೆಯಬಹುದು ಎನ್ನುತ್ತಾರೆ. ಪಾರಮಾರ್ಥ ಪಡೆಯಬೇಕಾದರೆ ಜಾತಿ ಸೂತಕಗಳನ್ನು ಮೀರಬೇಕು ಎಂಬ ಅಭಿಪ್ರಾಯ ಅವರದಾಗಿದೆ.

ತತ್ವ ಪದಕಾರರು ಸಹಜವಾಗಿ ಜಾತಿಯನ್ನು ಮೀರಿದವರು. ಗುರುಶಿಷ್ಯರ ಪರಂಪರೆಗೆ ಸೇರಿದವರು. ಆದರೆ ಪ್ರತಿಯೊಬ್ಬರೂ ಕೂಡ ಒಂದೊಂದು ಜಾತಿಗೆ ಸೇರಿದವರಿದ್ದರೂ ಅದರಲ್ಲಿ ಸಾಮಾಜಿಕ ಭಿನ್ನತೆಗಳು ಭೇದ ಭಾವಗಳು ಎಲ್ಲಿಯೂ ಕಂಡು ಬಂದಿಲ್ಲ. ಜಾತಿ ಮೀರಿದ ದಾರಿಯಲ್ಲಿ ಇದ್ದವರು. ಲೌಕಿಕ ಜೀವನದಲ್ಲಿ ಜಾತಿಯೊಂದಾದರೆ ಉದ್ಯೋಗದಲ್ಲಿ ಅವರು ಭಿನ್ನ ಭಿನ್ನ ವೃತ್ತಿಗಳಲ್ಲಿ ತೊಡಗಿಕೊಂಡಿದ್ದರು. ಅವರ ವೃತ್ತಿಗಳೇ ಜಾತಿಗಳಾದರೂ ಅವರು ಅವುಗಳಿಗೆ ಗಂಟು ಬೀಳಲಿಲ್ಲ. ಶರಣರಂತೆ ಕಾಯಕದಲ್ಲಿ ಕೈಲಾಸ ಚಿಂತನೆಯನ್ನು ಕಂಡಂತವರು. ದುಡಿಮೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿ ಸಾಮಾಜಿಕ ವ್ಯವಸ್ಥೆಯನ್ನು ಸರಿ ದಾರಿಗೆ ತರುವಲ್ಲಿ ಇವರ ಕೊಡುಗೆ ಅಪಾರವೆಂದು ಗ್ರಹಿಸಬಹುದು.

**ಪ್ರಭುತ್ವದ ವಿರುದ್ಧ ಸಂಘರ್ಷ**

ತತ್ವಪದಕಾರರು ಸಾಮಾಜಿಕ ವ್ಯವಸ್ಥೆಯಲ್ಲಿ ಜನ ಸಮುದಾಯಗಳು ಅನುಭವಿಸುತ್ತಿರುವ ನೋವು–ನಲಿವುಗಳೂ, ಅಸಮಾನತೆ, ಅಂಧಕಾರ, ಆಳುವ ವರ್ಗದವರ ಭೇದ ಭಾವ, ಉಚ್ಚ ನೀಚ ಎಂಬ ಅಂಶಗಳನ್ನು ಸಾಮಾಜಿಕವಾಗಿ ಕಂಡುಂಡವರು. ಬಡ ಬಗ್ಗರ ಜೀವನದ ಮೇಲೆ ಬರೆ ಎಳೆಯುವ ಪ್ರಭುಗಳ ಮನೋ ಇಚ್ಛಾ ದರ್ಪದ ಮಾತುಗಳು ಜನ ಸಾಮಾನ್ಯರಿಗೆ ಬದುಕುವುದೇ ಕಷ್ಟಕರವಾಗಿತ್ತು. ಅಂತಹ ಸಂದರ್ಭದಲ್ಲಿ ಜನ ಸಮುದಾಯಗಳ ಪರವಾಗಿ ನಿಂತು ಪ್ರಭುತ್ವದ ವಿರುದ್ಧ ಸೆಟೆದು ನಿಲ್ಲುತ್ತಾರೆ. ಅವರ ಇಂತಹ ನಿರ್ಧಾರಗಳು ಕೆಲವೊಮ್ಮೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬಂದಿದ್ದು ಉಂಟು. ಕಡಕೋಳ ಮಡಿವಾಳಪ್ಪನ ವಿಷಯದಲ್ಲಿ ಕೂಡಾ ಅದೇ ನಡೆದದ್ದು. ಮಡಿವಾಳಪ್ಪ ತಾನು ಜನ ಸಮುದಾಯಗಳಿಗೆ ವಿಚಾರಗಳನ್ನು ಬಿತ್ತುತ್ತಾನೆ. ಅವು ಸಣ್ಣ ವಿಷಯಗಳಲ್ಲಿ ಸಮಾಜವನ್ನು ಬಡೆದೆಬ್ಬಿಸುವ ವಿಚಾರಗಳು. ಅವತ್ತಿನ ವ್ಯವಸ್ಥೆಯಲ್ಲಿ ಜನರನ್ನು ಆಳುವವರು ವ್ಯಕ್ತಿಗಳಾಗಿದ್ದರು ಆದರೆ ವಿಚಾರಗಳು ಆಳುತ್ತವೆಯೆಂದು ಗೊತ್ತೆ ಇದ್ದಿಲ್ಲ. ಆ ಕೆಲವನ್ನು ಕಡಕೋಳು ಮಡಿವಾಳಪ್ಪನವರು ತಿಳಿಸಿ ಕೊಟ್ಟಾಗ ಇಡೀ ಪ್ರಭುತ್ವ ವರ್ಗಗಳೆಲ್ಲ ಸೇರಿಕೊಂಡು ಅವರ ವಿರುದ್ಧ ಕೊಡಲಿ, ಖಡ್ಗಗಳನ್ನು ಹಿಡಿದು ಬೆನ್ನಟ್ಟಿ ದೇಶ ಸಂಚಾರಿಗಳನ್ನಾಗಿ ಮಾಡಿದ್ದು ಇತಿಹಾಸ ಪುಟಗಳಲ್ಲಿ ಸೇರಿಕೊಂಡಿದೆ. ಜನ ಸಮುದಾಯಗಳೊಟ್ಟಿಗೆ ಸೇರಿ ಸಂಕಷ್ಟದ ಸಮಯದಲ್ಲಿ ಜೊತೆಗೆ ನಿಂತು ನಿಸ್ವಾರ್ಥ ಸೇವೆಗೈದವರು ಕಡಕೋಳ ಮಡಿವಾಳಪ್ಪನವರಾದರೆ ಅಂತಹ ಜನ ಸಮುದಾಯಗಳ ನಡುವೆ ನಿಂತು ದರ್ಪ, ದಬ್ಬಾಳಿಕೆಯಿಂದ ಅವರೇ ಅನ್ಯಾಯದ ದಾರಿಯಲ್ಲಿ ನಡೆದವರು ಪ್ರಭುತ್ವ ವರ್ಗವಾಗಿತ್ತು. ಅಂತಹ ಸಂದರ್ಭಗಳು ಜನರ ಬದಲಾವಣೆಗೆ ದಾರಿ ಮಾಡಿಕೊಟ್ಟಿತು. ಆ ಬದಲಾಣೆ ಪ್ರಭುತ್ವಕ್ಕೆ

ನುಂಗಲಾರದ ತುತ್ತಾಗಿತ್ತು. ಅನಿವಾರ್ಯವಾಗಿ ಅವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡಲು ಪ್ರಯತ್ನಿಸಿದ್ದು ಉಂಟು. ಸ್ಥಳೀಯವಾಗಿ ಊರ ಗೌಡ, ಕುಲಕರ್ಣಿ, ಜಮೀನುದಾರರು ವಿರುದ್ಧ ಅವರ ಮನೆಗಳಲ್ಲಿ ದುಡಿದು ಮುಪ್ಪಾಗಿದ್ದ ಜನ ಸಮುದಾಯಗಳು ಪ್ರತಿರೋಧಿಸಲು ಆಗದೆ ಇದ್ದಾಗ ಅವರ ನೆರವಿಗೆ ಒಂದು ತಮ್ಮ ತಾತ್ವಿಕತೆಯ ಮೂಲಕ ಅವರ ಧ್ವನಿಯಾಗಿ ಗಟ್ಟಿಯಾಗಿ ನಿಂತು ಸಂಘರ್ಷಕ್ಕೆ ಕಾರಣರಾದರು. ಅಂತಹವರ ವಿಚಾರಗಳ ಬೀಜಗಳೇ ಮೊಳಕೆಯೊಡೆದು ಬೆಳೆಯುತ್ತಾ ಇಡೀ ವ್ಯವಸ್ಥೆ ತಿರುಗಿ ಬೀಳುವುದೆಂದು ತಿಳಿದ ಆಳುವ ವರ್ಗಗಳು ಜನ ಸಮುದಾಯಗಳ ಶಕ್ತಿಯಾಗಿದ್ದ ಇವರನ್ನು ಹಣಿಯಲು ಕಾರಣವಾಯಿತು.

ಸಾಮಾಜಿಕವಾಗಿ ಅವತ್ತು ಆಳುವ ವರ್ಗಗಳಲ್ಲಿ ಪ್ರತಿಷ್ಠೆಗಳು, ಅಧಿಕಾರ ಅಂತಸ್ತಿಗಾಗಿ ಪೈಪೋಟಿ ಏರ್ಪಟ್ಟಿದ್ದು, ಜನಸಮಾನ್ಯರು ಬದುಕುವ ಛಲವನ್ನು ನುಂಗಿ ಹಾಕಿದ್ದವು. ತಂದೆ ತಾಯಿ ಜಗಳದಲ್ಲಿ ಕೂಸು ಬಡವಾಯಿತು ಎನ್ನುವಂತೆ ಅವರವರ ಅಧಿಕಾರಕ್ಕಾಗಿ ನಡೆದ ಪೈಪೋಟಿಯಲ್ಲಿ ಉಸಿರಾಡುವುದು ಕಷ್ಟವಾಗಿತ್ತು. ನ್ಯಾಯ ನಿಷ್ಠುರಿ ಲೋಕ ವಿರೋಧಿ ವ್ಯಕ್ತಿತ್ವವು ಆಳುವ ವರ್ಗಕ್ಕೆ ಪಿತ್ತ ನೆತ್ತಿಗೇರುವಂತೆ ಮಾಡಿತ್ತು. ಆ ಕಾರಣದಿಂದಾಗಿಯೇ ಭೂಮಿಯ ಮೇಲೆ ನೆಲೆ ನಿಲ್ಲದಂತೆ ಸ್ಥಾಪಿತ ಸಮಾಜ ಅಟ್ಟಾಡಿಸಿದೆ. ಮಠಗಳು ಕೂಡಾ ಪರೋಕ್ಷವಾಗಿ ಅಧಿಕಾರ ಚಲಾಯಿಸುತ್ತಿದ್ದವು. ಮಡಿವಾಳಪ್ಪನವರು ಇದಕ್ಕೆ ಹೊರತಾಗಿಲ್ಲ. ಯಾಕೆಂದರೆ ಅವರ ಬಾಲ್ಯವು ಕೂಡಾ ಆಳುವ ವರ್ಗಕ್ಕೆ ಅವರ ಬದುಕು ಬಲಿಯಾಗಿತ್ತು.

ಕೆಲವು ತತ್ವ ಪದಕಾರರಿಗೆ ಬದುಕಿನಲ್ಲಿ ಸಂಘರ್ಷಗಳು ಎದುರಾದರೆ ಇನ್ನು ಕೆಲವರಿಗೆ ಬದುಕೆಲ್ಲವೂ ಸಂಘರ್ಷಮಯವಾದುದೇ. ಇಂತ ಪರಿಸ್ಥಿತಿಯಲ್ಲಿ ಬದುಕಿದವರು ಸಮಾಜದ ಬದಲಾವಣೆಗೆ ತಮ್ಮನ್ನು ತಾವು ಬದಲಾಯಿಸಿಕೊಂಡರು. ಇವರ ಬದಲಾವಣೆ ಪರ್ವ ಸಮಾಜಕ್ಕೆ ಬಿತ್ತರಿಸಿದಾಗ ಸಂಘರ್ಷಗಳು ಏರ್ಪಟ್ಟವು. ಆಳುವ ವರ್ಗಗಳು ಸಮಾಜದಲ್ಲಿ ಕಂಟಕ ಪ್ರಾಯವಾಗಿದ್ದವು. ಅಂತಹ ಆಳುವ ವರ್ಗಗಳನ್ನು ಕಂಡು ಈ ಕೆಳಗಿನಂತೆ ವಿರೋಧಿಸಿದ್ದಾರೆ.

***"ಮೂರಿಪ್ಪತ್ತು ನಿಕ್ಕಾ ಎರಡು ದಿಡನೂರು ಇಂತ***
***ಖೋಡಿ ಕಳ್ಳರು ಊರ ತುಂಬ ಹಾರ***
***ಇವರಿಗಿ ಹದ್ದು ಹರಿದು ತಿನ್ನಲಿ ಎಷ್ಟುದ್ದ ಬೆಳದಾರ***
***ಸದ್ದು ಮಾಡದೆ ಸುಡುಗಾಡು ಸೇರುತಾರ"[2]***

ಎಂಬ ತಾತ್ವಿಕ ಪದದಲ್ಲಿ ಆಳುವ ವರ್ಗವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಆಳುವ ವರ್ಗಗಳನ್ನು **'ಕಳ್ಳರು'** ಎಂದು ಸಂಭೋದಿಸಿದ್ದಾರೆ. ಇವರು ಬಹಳಷ್ಟು ಇಂತಹವರು ಜನರು ಊರಿನಲ್ಲಿ ತುಂಬಿದ್ದಾರೆ. ಇದರಿಂದ ಸಮಾಜದ ಶೋಷಿತರ ಪಾಡು ಹೇಳತೀರದು. ಸಮಾಜವನ್ನು ಶೋಷಣೆಗೆ ಒಳಪಡಿಸಿ ಆರ್ಥಿಕವಾಗಿ ತುಂಬಾ ಮುಂದುವರೆದಿದ್ದಾರೆ. ಅನ್ಯರ ಕಣ್ಣಲ್ಲಿ ನೀರು ಹಾಕಿಸಿದವರನ್ನು ಆ ದೇವರು ಮೆಚ್ಚುವುದಿಲ್ಲ ಇವರು ಯಾರಿಗೂ ಗೊತ್ತಿಲ್ಲದೇ ಸತ್ತು ಹೋಗುತ್ತಾರೆ ಎಂಬ ನುಡಿ ಮಾರ್ಮಿಕವಾಗಿದೆ. ಇವರು ಸಂಘರ್ಷದಲ್ಲಿ ಇಡೀ ಜೀವನ ನಡೆಸುವಂತಾಗಿತ್ತು. ಅವರ ಚಿಂತನಾಕ್ರಮಗಳು ಉಳ್ಳವರ ಪಾಲಿಗೆ ಎಚ್ಚರಿಕೆಯ ಕರೆಗಂಟೆ ಆಗಿತ್ತು ಎಂಬುದು ಮಾತ್ರ ಸತ್ಯವಾಗಿತ್ತು.

ಸಮಾಜದಲ್ಲಿ ಅನೇಕ ಬಗೆ ಬಗೆಯ ವ್ಯಕ್ತಿಗಳು ಇದ್ದರೂ ನಡೆಸುವ ಅನಾಚಾರ, ಸಾಮಾಜಿಕ ನೋವು ನಲಿವುಗಳನ್ನು ನೀಡುವ ವ್ಯವಸ್ಥೆಯ ವಿರುದ್ಧ ವಿಡಂಬನೆಗಿಳಿದಿದ್ದು ನಿಷ್ಠುರವಾದಿಗಳಾಗಿ ಅಸಮಾನತೆಯೆ ನೆಲೆಯಾದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವಲ್ಲಿ ನಿರತರಾಗುತ್ತಾರೆ. ಅವರು ಯಾರೇ ಆಗಿರಲಿ ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗಲಿ, ಪ್ರಬಲ ಧಾರ್ಮಿಕ ವ್ಯಕ್ತಿಗಳೇ ಆಗಿರಲಿ, ಸಾಮಾಜಿಕವಾಗಿ ಯಾವುದು ಸರಿ ಕಾಣುವುದಿಲ್ಲವೋ ಅವುಗಳನ್ನು ನಿಷ್ಠುರವಾಗಿ ಖಂಡಿಸುತ್ತಿದ್ದರು. ಆಳುವ ವರ್ಗಗಳೇ ತುಂಬಿಕೊಂಡಿರುವ ಈ ಸಮಾಜದಲ್ಲಿ ಬಡ ಬಗ್ಗರು ಎದುರು ನಿಂತು ಮಾತಾಡುವ ಹಾಗೇ ಇರಲಿಲ್ಲ. ತುಟಿ ಪಿಟಿಕ್ಕೆನ್ನದೇ ಶೋಷಣೆ ಅನುಭವಿಸುಬೇಕಾಗಿತ್ತು. ಅಂತಹ ವ್ಯವಸ್ಥೆಯ ವ್ಯಕ್ತಿಗಳ ವಿರುದ್ಧವಾಗಿ ನ್ಯಾಯಕ್ಕಾಗಿ ಪ್ರತಿಭಟಿಸಿದ್ದು ನೆಲ ಮೂಲ ಭಾಷೆಯಿಂದ ಟೀಕಿಸಿದ್ದು, ಅದು ಹೀಗಿದೆ;

***"ಮಾನಗೇಡಿ ಮಂದಿ ಹುಟ್ಟಿ ಮತ್ಯಾ್ಯ ಕೆಡಿಸ್ಯಾರೊ***
***ಉಡಾಳ ಮಂದಿ ಊರೊಳಗ ಹಿಡಿಯಲ್ಲೊದರೊ***
***ಪತ್ಯ ಮಾಡೋ ಉತ್ತಮರೆಲ್ಲ ಎತ್ತ ಹೋದರೊ***
***ಎಪ್ಪಾ, ಗಪ್ಪಾ ಹೊಡಿಯಾ ಅಪ್ಪದೇರು ಹೆಚ್ಚಿಗಾದರೊ"***[5]

ಈ ಮೇಲಿನ ಕಡಕೋಳ ಮಡಿವಾಳಪ್ಪನ ಮಾತು ದುರಂಕಾರಿ, ಸ್ವಾರ್ಥ, ದುಷ್ಟವ್ಯಕ್ತಿಗಳನ್ನು ಕುರಿತು ಕಟು ಟೀಕೆಗೆ ಒಳಪಡಿಸಿದ್ದಾರೆ. ಮಾನಗೇಡಿ ಮಂದಿ ಎಂದರೆ ಅನ್ಯಾಯಕ್ಕೆ ಮುಖ ತೊಳೆಯುವರೂ ಅಧರ್ಮಿಯರು, ಮೋಸಗಾರರು, ವಂಚಕರು, ಸ್ವಾರ್ಥ ಗುಣವುಳ್ಳವರೇ ಎಂಬಿತ್ಯಾದಿ ಅರ್ಥವನ್ನು ಕೊಡುತ್ತದೆ. ಇವರು ಇಡೀ ಸಾಮಾಜಿಕ ವ್ಯವಸ್ಥೆಯನ್ನೆ ಹಾಳು ಮಾಡುವಂತವರು. ಇಂತವರೆ ತಮ್ಮ ದುರ್ಗುಣಗಳಿಂದ ಸಮಾಜವನ್ನು ಹಾಳು ಮಾಡಿದ್ದಾರೆ ಎಂಬುದಾಗಿ ಕಠೋರವಾಗಿ ವಿರೋಧಿಸಿದ್ದಾರೆ. ಇಂತಹವರನ್ನು 'ಉಡಾಳರು' ಎಂಬ ಜವಾರಿ ಭಾಷೆಯಲ್ಲಿ ಕಠೋರವಾಗಿ ಹೇಳಿದ್ದಲ್ಲದೇ ಉತ್ತಮರು ಎಲ್ಲಿ? ಎಂದು ಅವರ ಪರವಾದ ಮಾತು ಉತ್ತಮರ ಕ್ಷೇಮದ ಇರುವಿಕೆಯೂ ಕೂಡಾ ವ್ಯಕ್ತ ಪಡಿಸಿದ್ದಾರೆ. ಸಾಮಾಜಿಕವಾಗಿ ಒಳ್ಳೆಯ ವ್ಯಕ್ತಿಗಳೆಂದು ಕಂಡು ಬಂದರೂ ಧಾರ್ಮಿಕ ವೇಶದೊಂದಿಗೆ ಜನರಿಗೆ ಅನ್ಯಾಯಕ್ಕೆ ಒಳಗಾಗಿಸುತ್ತಿದ್ದಾರೆ. ಅಸಹಾಯಕರಾದ ಸಮಾಜದ ಬಡವರೆಲ್ಲರ ಮೇಲೆ ಅಪವಾದ ಹೊರಿಸಿ ಮಾಡದ ತಪ್ಪಿಗೆ ಶಿಕ್ಷೆಗೆ ಒಳಪಡಿಸುವ ಇಂತಹ ವ್ಯವಸ್ಥೆಯನ್ನು ತೀರಾ ಖಂಡಿಸಿದ್ದಾರೆ.

ಮುಡದಾರಿ ಮಲ್ಲಪ್ಪ ಎಂಬ ದರ್ಪಿಷ್ಟ ಸಾಹುಕಾರರು ಜನ ಸಾಮಾನ್ಯರ ಮೇಲೆ ತಮ್ಮ ಕಾಮದ ಭಾವನೆಯಿಂದ ಅನೇಕರನ್ನು ಬಳಸಿಕೊಂಡಿದ್ದರು. ಜನ ಸಮುದಾಯಗಳ ಮಾನ ಮರ್ಯಾದೆಗಳೇ ಇವರ ದರ್ಪ, ದೌರ್ಜನ್ಯಗಳಲ್ಲಿ ಹುದುಗಿ ಹೋಗಿದ್ದವು. ಧ್ವನಿ ಎತ್ತುವ ಹಾಗೆ ಇರಲಿಲ್ಲ. ರಾಚವ್ವ ಎಂಬ ಮಹಿಳೆಯ ಬಾಲ್ಯ ವಿವಾಹದಲ್ಲಿ ಗಂಡನನ್ನು ಕಳೆದುಕೊಂಡಿದ್ದಳು. ಮೊದಲೆ ಗಂಡನಿಲ್ಲದ ಅಬಲೆ ಹೆಣ್ಣು ಈ ಸಮಾಜ ನೋಡುವ ರೀತಿಯೇ ಬೇರೆಯಾಗುತ್ತದೆ. ಅವತ್ತಿನ ಜಮೀನ್ದಾರರು ಏನೇ ಮಾಡಿದರೂ ಯಾರು ಕೇಳುವ ಹಾಗೆ ಇರಲಿಲ್ಲ. ಪ್ರತಿಭಟಿಸುವ ಪ್ರಮೇಯವೇ ಎಲ್ಲರಿಗೂ ಇದ್ದರೂ ಕೂಡಾ ಆ ಗೋಜಿಗೆ ಯಾರು ಹೋಗುತ್ತಿರಲಿಲ್ಲ. ಬಡತನದಲ್ಲಿ ಬೆಂದ ಆ ಹೆಣ್ಣು ಅವನ ದೌರ್ಜನ್ಯಕ್ಕೆ ಸೆರಗು ಹಾಸಬೇಕಾಗಿತ್ತು. ಮೀನಾಕ್ಷಿ ಬಾಳಿ ಅವರು ಹೇಳುವಂತೆ " ಜಮೀನ್ದಾರಿ ವ್ಯವಸ್ಥೆಯಲ್ಲಿ ಬಡವರ ಮನೆಯೇ ಹೆಣ್ಣು ಮಕ್ಕಲು ಉಳ್ಳವರಿಗೆ ಸೆರಗು ಹಾಸ ಬೇಕಾದದ್ದು ಮಾಮೂಲು. ಅಂದು ಅಂದಿನ ಸಮಾಜ ವ್ಯವಸ್ಥೆಯಲ್ಲಿ ಒಪ್ಪಿತ ಮೌಲ್ಯ"[6]

ಎಂದು ಅಭಿಪ್ರಾಯ ವ್ಯಕ್ತಿಪಡಿಸುತ್ತಾರೆ. ಇಂತ ಸಾಮಾಜಿಕ ವ್ಯವಸ್ಥೆ ಬಹುಶಃ ಮುಂದಿನ ತಲೆಮಾರುವಿನಲ್ಲಿ ಜನರು ಮಾನ ಹರಾಜು ಹಾಕಿ ತಮ್ಮ ಮುಂದಿನ ಜಮೀನ್ದಾರಿ ತಲೆ ಮಾರುಗಳನ್ನು ನೋಡುವ ದೃಷ್ಟಿಕೋನ ಹೇಗೆ? ಎಂಬ ಪ್ರಶ್ನೆಯೂ ಕೂಡಾ ಅವರ ತಲೆಯಲ್ಲಿ ಒಂದು ವೇಳೆ ಬಂದಿರಲಿಲ್ಲವೇನೋ? ಒಂದು ವೇಳೆ ಬಂದಿದ್ದರೆ ಆ ಕೆಟ್ಟ ವ್ಯವಸ್ಥೆಗೆ ಅವತ್ತೇ ತಿಲಾಂಜಲಿ ಇಡುತ್ತಿದ್ದರೇನೋ? ಒಟ್ಟಿನಲ್ಲಿ ನನಗನಿಸದ ಹಾಗೆ ಅವರು ತಮ್ಮ ಅಧಿಕಾರ, ಅಹಂಕಾರ, ದರ್ಪ, ದೌರ್ಜನ್ಯದಿಂದ ತಾವು ಮಾಡಿದ್ದು ತಪ್ಪು ಎಂದು ಗೊತ್ತುಮಾಡಿದ್ದಾರೆ. ಇಂತಹ ವ್ಯವಸ್ಥೆ ಹೀನ ಮನಸ್ಥಿತಿಯನ್ನು ತೋರಿಸುತ್ತದೆ. ರಾಚವ್ವ ಅವರ ದಬ್ಬಾಳಿಕೆ ಸಹಿಸದೆ ಗುರುವಾದ ಮಡಿವಾಳಪ್ಪ ಮತ್ತು ಅವರ ಸಂಗಡಿಗರಲ್ಲಿ ಅಳನನ್ನು ತೋಡಿಕೊಳ್ಳುತ್ತಾಳೆ. ಇದರಿಂದ ಕ್ರಿಯಾಶೀಲರಾಗಿ ಸಾರ್ವಜನಿಕವಾಗಿಯೇ ಮಾನ ಹರಾಜು ಹಾಕಲು ತಮ್ಮ ನಡುವಿನ ಸಂಬಂಧ ಕುರಿತು ಪದ ಕಟ್ಟಿ ಹಾಡುತ್ತಾಳೆ. ಅದು ಹೀಗಿದೆ;

***“ನಾಚಿಕಿಲ್ಲೋ ಭಾಡ್ಯಾ ನಮಗ್ಯಾಕ ತಡವತಿ***
***ಛೀ ಛೀ ಅನಿಸಿಕೊಂಡಲ್ಲಿ ಬಂದು ಯಾಕ ಡೊಗ್ಗತಿ ॥ಪ॥***
***ಗುರುವಿಗೊಪ್ಪಿಸಿದಂಥ ಚಿಟಿಕಿ ಹಿಂದಕ ಬೇಡತಿ***
***ಇಕ್ಕೂಳ ಜ್ವಾಲಾ ತಿಂದು ನೀನು ಕೈ ಬಾಯ್ ಹಾಕತಿ***
***ಬೆಟಗೇರಿಯಿಂದ ಸುಳ್ಳೇ ಪತ್ರ ತಂದು ತೋರಸತಿ***
***ಕರಿಮಣಿ ಕಟ್ಟಿಕೊಂಡೀನಿ ಅಂತ ನನ್ನ ಹಾಟ ಕುಡಿತಿ ॥1॥***
***ತುಡಗಾ ಮಾಡಿದಂಥ ಭ್ಯಾಡ್ಯಾಗ ನಾಚಿಕಿಲ್ಲೇಳೊ***
***ನನ್ನ ಎಳಕೊಂಡ ಹೋಗಾ ಕುರು ಸಾಲ್ಯಾನ ತಾಯೇನು ಹಡದಾಳೊ***
***ಪಡಕೊಂಡಂಥ ಕೃಷ್ಣನ ಪಾದ ಬಿಟ್ಟವಳಲ್ಲೇಳೊ***
***ಮುಡದಾರ ಮಲ್ಲ್ಯಾನ ಎದಿಮ್ಯಾಲ ಒದ್ದು ಖೈನೂರ ಊರವಳೋ ॥2॥”*** [10]

ಎಂಬ ಪದದಲ್ಲಿ ರಾಚವ್ವ ಇಡೀ ಮುಡದಾರ ಮಲ್ಲಪ್ಪನ ಜೀವಮಾನ ಸಂಬಂಧವನ್ನು ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಎದುರು ಹಾಕಿಕೊಂಡೆ ಪ್ರತಿಭಟಿಸುವ ಜಿದ್ದಿಗೂ ಬಿದ್ದಿದ್ದು ಹಗುರ ಮಾತೇನಲ್ಲ. ಅವನನ್ನು ಅಪ್ಪಟ ಭಾಷೆಯಲ್ಲಿ ಹಾಟುಗಳ್ಳ, ತುಡುಗ ಭ್ಯಾಡ್ಯಾ ಎಂಬ ಪದಗಳಿಂದ ಬೈಯ್ಯುವ ರೀತಿ ನೀತಿಗಳು ಒಂದು ಕ್ಷಣ ಸಮಾಜ ದಿಗ್ಭ್ರಮೆಗೊಂಡಿರಬಹುದು. ಮುಡದಾರ ಮಲ್ಲಪ್ಪನ ಜೊತೆಗಿನ ಇಷ್ಟು ದಿನದ ಶಾರೀರಿಕ ಸಂಬಂಧದಿಂದ ರೋಸಿ ಹೋಗಿ ಹೆಣ್ಣೊಬ್ಬಳು ಸಿಟ್ಟು ಸೆಡವುಗಳಿಂದ ನನ್ನ ದೇಹದ ಮೇಲೆ ನನಗೆ ಮಾತ್ರವೇ ಹಕ್ಕು ಇರುವುದು. ಮತ್ಯಾರಿಗೂ ಯಾವುದೇ ರೀತಿಯ ಹಕ್ಕು ಇರುವುದಿಲ್ಲ. ಮತ್ಯಾರಿಗೂ ಯಾವುದೇ ರೀತಿಯ ಹಕ್ಕು ಕೊಡುವುದಿಲ್ಲವೆಂಬ ಅವಳ ಅಚಲ ಪ್ರತಿಪಾದನೆ ಎದ್ದು ಕಾಣುತ್ತದೆ.

ಹೀಗೆ ಸಾಮಾಜಿಕ ಜೀವನದಲ್ಲಿ ಪ್ರಭುತ್ವವಾದಿ ವರ್ಗಗಳು ಸಾಮಾಜಿಕ ವ್ಯವಸ್ಥೆಯ ಮೇಲೆ ನಡೆಸಿದ ಇಂತಹ ಹೀನ ಕೃತ್ಯಗಳು, ದಬ್ಬಾಳಿಕೆ ದೌರ್ಜನ್ಯಗಳು, ಜನ ಸಮಾನ್ಯರಿಗೆ ಉಸಿರು ಗಟ್ಟಿಸುವಂತಾಗಿದ್ದವು. ಇಂತವುಗಳ ವಿರುದ್ಧ ಜನ ಸಾಮಾನ್ಯರೊಂದಿಗೆ ತತ್ವ ಪದಕಾರರೇ ಒಟ್ಟು ಗೂಡಿ ಸಾರ್ವಜನಿಕರೆದುರೆ ಅದರ ಅನೀತಿಯನ್ನು ತಮ್ಮ ತಾತ್ವಿಕ ಪದಗಳ ಮೂಲಕ ಕಟ್ಟಿ ಎಲ್ಲರೆದುರು ಮಾನ ಹರಾಜು ಮಾಡುವ ರೀತಿಗಳು

ಒಂದು ರೀತಿಯಲ್ಲಿ ಸಮಾಜದಲ್ಲಿ ಪ್ರಭುತ್ವದ ವಿರುದ್ಧ ಸಂಘರ್ಷಗಳು ಹೆಚ್ಚಾಗಲು ಕಾರಣೀಭೂತವಾದವು. ಇದರ ಪ್ರಭಾವಗಳಿಂದ ಸಮಾಜಿಕ ವ್ಯವಸ್ಥೆ ಅಲ್ಲೋಲ ಕಲ್ಲೋಲವಾಯಿತು.

**ಕೊನೆ ಟಿಪ್ಪಣೆಗಳು**

1. ಶಾಂತಪ್ಪ ಟಿ. ಗುರೋಡೆ. (2010). *ಗುಲ್ಬರ್ಗಾ ಜಿಲ್ಲೆಯ ತತ್ವಪದಕಾರರು* ಪು. 135.
2. ಅಮರೇಶ ನುಗಡೋಣಿ. (2014). ತತ್ವಪದ ಸಾಹಿತ್ಯ ಅಧ್ಯಯನ. ಪು. 32–33.
3. ಶಾಂತಪ್ಪ ಟಿ.ಗುರೋಡೆ. (2010). ಪೂರ್ವೋಕ್ತ, ಪು.132.
4. ಮಲ್ಲಿಕಾರ್ಜುನ ಜಾಬ, (2002). ಗುಲಬರ್ಗಾ ಜಿಲ್ಲೆಯ ದಲಿತ ತತ್ವಪದಕಾರರು. ಪು. 110.
5. ಅದೇ., ಪು.106.
6. ಮೀನಾಕ್ಷಿಬಾಳಿ. (2019). ತತ್ವಪದ ಮತ್ತು ಮಹಿಳೆ, ಪು. 123–124.
7. ಮೀನಾಕ್ಷಿ ಬಾಳಿ. (2015). ಬಂಡಾಯದ ಕಿಡಿ ಕಡಕೋಳ ಮಡಿವಾಳಪ್ಪ. ಪು.111.
8. ಅಮರೇಶ ನುಗಡೋಣಿ. (2014). ಪೂರ್ವೋಕ್ತ, ಪು.73.
9. ಮೀನಾಕ್ಷಿ ಬಾಳಿ. (2019). ಪೂರ್ವೋಕ್ತ, ಪು.73.
10. ಅದೇ. ಪು.75.

**ಪರಾಮರ್ಶನ ಗ್ರಂಥಗಳು**


- ಅಮರೇಶ ನುಗಡೋಣಿ. (2014). *ತತ್ವಪದ ಸಾಹಿತ್ಯ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ. ಹಂಪಿ.
- ಚೆನ್ನ ಬಸಪ್ಪ ಚಿಲ್ಕರಾಗಿ (ಸಂ,) (2017). ತತ್ವ ಪದಗಳ ಸಂಗ್ರಹ. ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
- ಬಸವರಾಜ ಸಬರದ. (2000) ಹೈದರಾಬಾದ್ ಕರ್ನಾಟಕದ ತತ್ವಪದಗಳು. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮೀನಾಕ್ಷಿ ಬಾಳಿ. (2019). ತತ್ವಪದ ಮತ್ತು ಮಹಿಳೆ. ಲಡಾಯಿ ಪ್ರಕಾಶನ ಗದಗ.
- ಮೀನಾಕ್ಷಿ ಬಾಳಿ. (2015). ಬಂಡಾಯದ ಕಿಡಿ ಕಡಕೋಳ ಮಡಿವಾಳಪ್ಪ, ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ. ಬೆಂಗಳೂರು.
- ಲಕ್ಷ್ಮೀನಾರಾಯಣ ಭಟ್. ಎನ್. ಎಸ್. (2017). ಸಂತ ಕವಿ ಶಿಶುನಾಳ ಶರೀಫ್ ಸಾಹೇಬರು. ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ. ಬೆಂಗಳೂರು.
- ರಹಮತ್ ತರೀಕೆರೆ. (2011). ಕರ್ನಾಟಕದ ಸೂಫಿಗಳು. ಅಭಿನವ ಪ್ರಕಾಶಕರು, ಬೆಂಗಳೂರು.
- ಶಾಂತಪ್ಪ ಟಿ. ಗುರೋಡೆ. (2011). ಗುಲಬರ್ಗಾ ಜಿಲ್ಲೆಯ ತತ್ವ ಪದಕಾರರು. ತುಳಸಿ ಪ್ರಕಾಶನ ಸಲಗರ. ವ್ಹಿ. ಕೆ. ಗುಲಬರ್ಗಾ.